ಮರುದಿನ ಅದೇ ಜಾಗಕ್ಕೆ ಹೋದಾಗ ಕಂಡ ದೃಶ್ಯ ಎದೆ ನಡುಗಿಸುವಂಥದ್ದು. 'ಕ್ರೇನು ಆ ಟನ್ನುಗಟ್ಟಲೆ ಭಾರದ ಕಂಬವನ್ನು ಎತ್ತಿಕೊಂಡು ಮತ್ತೇರಿ ತೂರಾಡುತ್ತಿರುವ ಕುಡುಕನೊಬ್ಬ ಬಾಟಲಿಯನ್ನು ಹಿಡಿದುಕೊಂಡಂತೆ ವಾಲಾಡುತ್ತ ನಿಧಾನಕ್ಕೆ ಗುಂಡಿಯ ಬಳಿಗೆ ತೆಗೆದುಕೊಂಡು ಬಂದಿತು'. ಈ ವಿವರಣೆ ನೀಡುವ ಚಿತ್ರಣ ನಮ್ಮನ್ನು ಕಂಗೆಡಿಸುವಷ್ಟು ಶಕ್ತಿಶಾಲಿಯಾಗಿದೆ. ಧ್ವನಿಯಿಲ್ಲದವರನ್ನು ಜೀವಂತವಾಗಿ ಸಮಾಧಿಮಾಡುವ ಯಂತ್ರದ ಚಿತ್ರಣದೊಂದಿಗೇ ಕಥೆ ಮುಗಿದಿದ್ದರೆ, ಆ ರೂಪಕದ ಕಾರಣಕ್ಕೇ ಈ ಕಥೆ ಅನನ್ಯವಾದ ಧ್ವನಿಶಕ್ತಿಯಿಂದ ಬೆಳಗುತ್ತಿತ್ತು. ಮನಸೊಳಗೇ ಬೆಳೆಯುತ್ತ, ಅದು ಉಂಟುಮಾಡುವ ಪರಿಣಾಮವೂ ಅಷ್ಟೇ ಸತ್ವಶಾಲಿಯಾಗಿರುತ್ತಿತ್ತು. ಆದರೆ, ಕಥೆಗಾರ ಇಲ್ಲಿಗೇ ನಿಲ್ಲದೆ ಕಥೆಯನ್ನು ಮುಂದುವರಿಸುತ್ತಾನೆ. ಹಾಗೆ ಮುಂದುವರಿದು, ಆ ಗುಂಗುರುಕೂದಲಿನ ಹುಡುಗನನ್ನು ನಿರೂಪಕನಿಗೆ ಮುಖಾಮುಖಿಯಾಗಿಸಿ, 'ನಿಮಗೆ ನಾನು ಜೀವನಪೂರ್ತಿ ಅದೇ ಬಸ್‌ಸ್ಟಾಪಿನಲ್ಲಿ ನಿಂತ್ಕೊಂಡಿರ್‍ಬೇಕಿತ್ತಾ ಸಾರ್?' ಎಂಬ ಸಾಧಾರಣ ಪ್ರಶ್ನೆಯನ್ನು ಆ ಪಾತ್ರದ ಬಾಯಲ್ಲಿ ಆಡಿಸಿ 'ದಡ ಮುಟ್ಟಿಸುತ್ತಾರೆ'. ಪಾತ್ರದ ಬಾಯಲ್ಲಿ ಸಾಮಾಜಿಕ ನ್ಯಾಯದ ಮಾತನ್ನು ಆಡಿಸಿ ಕಥೆಗಾರ ನಿರಾಳಗೊಂಡಂತಿದೆ, ಓದುಗರಿಗೂ ಅಂಥದ್ದೊಂದು ನಿರಾಳಭಾವ ಹುಟ್ಟುತ್ತದೆ. ಆ ನಿರಾಳಭಾವದಲ್ಲಿಯೇ ಕುಡುಕ ಬಾಟಲಿ ಹಿಡಿದಂತೆ ಟನ್‌ಗಟ್ಟಲೆ ಭಾರದ ಕಂಬವನ್ನು ಹೊತ್ತುತಂದು ನೆಲದೆದೆಗೆ ಇರಿಯುವ ಯಂತ್ರದ ಚಿತ್ರಣ ಮನಸ್ಸಲ್ಲಿ ಉಂಟುಮಾಡುವ ಅಸ್ವಸ್ಥತೆಯೂ ಮರೆತುಹೋಗುತ್ತದೆ!

'ಜಮಾ' ಈ ಸಂಕಲನದ ಇನ್ನೊಂದು ಗಮನಾರ್ಹ ಕಥೆ. ಉಳಿದ ಹಲವು ಕಥೆಗಳಲ್ಲಿನ ವ್ಯಂಗ್ಯ ಇಲ್ಲಿಲ್ಲ. ಆದರೆ, ನಿಷ್ಕಳಂಕವಾಗಿ ಒಬ್ಬರಿಗೊಬ್ಬರು ಒದಗಿಬರುತ್ತ ಬದುಕುತ್ತಿರುವ ಸಮಾಜದಲ್ಲಿ ಮತಾಂಧತೆಯ ವಿಷ ಏರತೊಡಗಿದ್ದರ ಕುರಿತು ವಿಷಾದವಿದೆ.

ಎರಡು ಭಿನ್ನ ದೃಷ್ಟಿಕೋನದ ಮನುಷ್ಯರು ಬದುಕಿನಲ್ಲಿ ಎದುರಾಗುವ ಅನಿರೀಕ್ಷಿತ ಘಟನೆಗಳಿಂದ ತಮ್ಮ ದೃಷ್ಟಿಕೋನವನ್ನು ಬದಲಿಸಿಕೊಳ್ಳುವ ಕಥೆ 'ಬೂದು ಬಣ್ಣದ ಮಾನವ'. ಇದು ತಾನು ಎಲ್ಲಿಗೆ ತಲುಪುತ್ತೇನೆ ಎಂದು ಗೊತ್ತಿದ್ದೇ ಮಾಡಿದ ಪ್ಯಾಕೇಜ್ಡ್ ಪ್ರವಾಸದ ಹಾಗೆ ಭಾಸವಾಗುತ್ತದೆ. ಸಂದೇಶವನ್ನು ಮೊದಲೇ ನಿರ್ಧರಿಸಿಕೊಂಡು, ಅದಕ್ಕೆ ಹೊಂದುವ ಹಾಗೆ ಬೆಳೆಸುತ್ತ ಹೋಗುವ ಇಂಥ ಕಥೆಗಳು ಕಥೆಗಾರನನ್ನು ಮೀರಿ ಬೆಳೆಯುವಷ್ಟು ಸ್ವಂತಿಕೆ ಹೊಂದಿರುವುದಿಲ್ಲ. ಹಾಗಾಗಿಯೇ ಇದರಲ್ಲಿನ ಪಾತ್ರಗಳೂ ಕಥೆಗಾರನ ಅನಿಸಿಕೆಯನ್ನು ವ್ಯಕ್ತಪಡಿಸುವ ಟೂಲ್ ಆಗಿಯಷ್ಟೇ ಕೆಲಸ ಮಾಡುತ್ತಿರುತ್ತವೆ.

'ಸರಳು', 'ಛೇದನ', 'ಚುಚ್ಚುಮದ್ದು'ವಿನಂಥ ಕಥೆಗಳು ಕಂಡು, ಕೇಳಿದ ಘಟನೆಗಳನ್ನು ಸ್ವಾರಸ್ಯಕರವಾಗಿ ನಿರೂಪಿಸುವ, ಅದಕ್ಕೊಂದು ನ್ಯಾಯೋಚಿತ ಸಂದೇಶಯುಕ್ತ ಮುಕ್ತಾಯವನ್ನು ಕೊಡುವ ಸಾಧಾರಣ ಕಥೆಗಳು. ಒಂದು ಓದಿನ ರಂಜನೆಯ ಆಚೆಗೆ ಮನಸೊಳಗೆ ಬೆಳೆಯುವ ಗುಣ ಈ ಕಥೆಗಳಿಗೆ ಇಲ್ಲ.

ಈ ಸಂಕಲನದ ಹಲವು ಗಮನಾರ್ಹ ಕಥೆಗಳ ಮೂಲಕ ಸಂಪತ್ ಅವರು ತನ್ನತನದ ಸಹಿಯನ್ನಂತೂ ಹಾಕಿದ್ದಾರೆ. ಕಂಡ ಘಟನೆಗಳ, ಅನುಭವಗಳ ಸುವ್ಯವಸ್ಥಿತ ಜೋಡಣೆ ಕಥೆಯಾಗಲಾರದು. ಕಥೆಗಾರನನ್ನು ಮೀರಿ ಬೆಳೆಯದ ಹೊರತು ಅದಕ್ಕೊಂದು ದರ್ಶನಶಕ್ತಿ ಸಿಗಲಾರದು ಎಂಬುದು ಸಂಪತ್ ಅವರಿಗೆ ಗೊತ್ತಿಲ್ಲದಿರುವುದೇನಲ್ಲ. ಅದನ್ನು ತಮ್ಮ ಬರವಣಿಗೆಯಲ್ಲಿ ಅಂತಸ್ಥಗೊಳಿಸಿಕೊಳ್ಳಬೇಕಾದರೆ, ತಾವೇ ಕಟ್ಟಿಕೊಂಡ ಬರವಣಿಗೆಯ ಆಕರ್ಷಕ ದಾರಿಗಳ ಜೊತೆ 'ಲೆಟ್ಸ್ ಬ್ರೇಕಪ್' ಎಂದು ಹೇಳಿ, ಬದುಕಿನ ಅರ್ಥವನ್ನು ಶೋಧಿಸುವ, ಅದರೆಲ್ಲ ಸಂಕೀರ್ಣತೆಯೊಟ್ಟಿಗೇ ಹಿಡಿದಿಡುವ ಹೊಸ ದಾರಿಗಳನ್ನು ಹುಡುಕಿಕೊಳ್ಳುವ ಸ್ಥೈರ್ಯ ತೋರಬೇಕಾಗುತ್ತದೆ. ಪದೇ ಪದೇ ತನ್ನ ಸಲಕರಣೆಗಳನ್ನು ಮುರಿದು ಕಟ್ಟಿಕೊಳ್ಳುತ್ತಲೇ ಬೆಳೆಯಬೇಕಾದದ್ದು ಸೃಜನಶೀಲ ಪ್ರಕ್ರಿಯೆಯಲ್ಲಿ ಅನಿವಾರ್ಯ. ಆದರೆ, ಅದಕ್ಕೆ ಸಾಕಷ್ಟು ಧೈರ್ಯ, ನಿಷ್ಠುರತೆ ಮತ್ತು ಪ್ರಾಮಾಣಿಕತೆ ಬೇಕು. ಅವು ಸಂಪತ್ ಅವರಲ್ಲಿ ಇವೆ ಎನ್ನುವುದಕ್ಕೆ ಈ ಸಂಕಲನದಲ್ಲಿ ಸಾಕಷ್ಟು ಪುರಾವೆಗಳು ದೊರಕುತ್ತವೆ. ಹಾಗಾಗಿಯೇ ಅವರ ಮುಂದಿನ ಬರವಣಿಗೆಯ ಕುರಿತು ನಿರೀಕ್ಷೆ ಮತ್ತು ಆಸಕ್ತಿಯಿಂದ ಕಾಯಬೇಕಾಗಿದೆ. ●